ಶ್ರೀ ವಾಟಾಳ್ ನಾಗರಾಜ್ : ಈ ಕೆಲಸವನ್ನು ಈ ತಿಂಗಳೇ ಮಾಡುವುದು. ಇದನ್ನು 33 ದಿವಸದಲ್ಲಿ ಮುಗಿಸುವುದಕ್ಕೆ ಸಾಧ್ಯವೇ ಎಂದು ನಾನು ಕೇಳುತ್ತಿರುವೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಈ ಕೆಲಸವನ್ನು ಪೂರ್ತಿ ಮಾಡಿ ನಾವು ತೋರಿಸುತ್ತೇವೆ. ಆ ಕೆಲಸವನ್ನು ಮುಗಿಸದೇ ಇದ್ದರೆ ತಾವು ಏಪ್ರಿಲ್ ತಿಂಗಳಿನಲ್ಲಿ ನನ್ನನ್ನು ಕೇಳಿ. ಆ ರಸ್ತೆ ಕೆಲಸವನ್ನು ಮುಗಿಸಿದ ತಕ್ಷಣ ತಮಗೆ ಪತ್ರ ಬರೆಯುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಏಪ್ರಿಲ್ ಒಂದನೇ ತಾರೀಖು ಸದನ ಕಾರ್ಯಕಲಾಪ ನಡೆದರೆ ಈ ವಿಷಯದ ಬಗ್ಗೆ ಆ ದಿನ ಕೇಳುತ್ತೇನೆ.

ಅಧ್ಯಕ್ಷರು : ನಂಜಾಮರಿಯವರೆ, ತಮ್ಮ ಪ್ರಶ್ನೆಗೆ ಸನ್ಮಾನ್ಯ ಸಚಿವರು ಸ್ವಲ್ಪ ಕಾಲಾವಕಾಶ ಕೇಳಿದ್ದಾರೆ. ಉತ್ತರ ಬಂದಿಲ್ಲ. ಅದನ್ನು ತಡೆ ಹಿಡಿದಿದ್ದೇನೆ. ಮುಂದಿನ ಪ್ರಶ್ನೋತ್ತರ ಸಮಯದಲ್ಲಿ ಇದನ್ನು ತೆಗೆದುಕೊಳ್ಳೋಣ.

ಪ್ರವಾಸೋದ್ಯಮ ಇಲಾಖೆಯ ಪ್ರೇಕ್ಷಣೀಯ ಸ್ಥಳಗಳು

610 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪಾಂಡವಪುರ ತಾಲ್ಲೂಕಿನಲ್ಲಿ ಮೇಲುಕೋಟೆ : ಕೆರೆತೊಣ್ಣೂರು ಮತ್ತು ಕುಂತಿ ಬೆಟ್ಟ ಈ ಮೂರು ಪ್ರೇಕ್ಷಣೀಯ ಸ್ಥಳಗಳು ಪ್ರವಾಸೋದ್ಯಮ ಇಲಾಖೆಗೆ ಸೇರ್ಪಡೆ ಆಗಿವೆಯೇ?

ಆ) ಹಾಗಿದ್ದಲ್ಲಿ ಇವುಗಳ ಅಭಿವೃದ್ಧಿಗೆ ಈ ವರ್ಷದಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಶ್ರೀ ಜಿ.ಹೆಚ್. ಪಟೇಲ್ (ಉಪ ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಮೇಲುಕೋಟೆಯಲ್ಲಿ ಕೇಂದ್ರ ಧನ ಸಹಾಯದಿಂದ ರೂ. 33.00 ಲಕ್ಷ ಅಂದಾಜು ವೆಚ್ಚದಲ್ಲಿ ಪ್ರವಾಸಿ ಸೌಲಭ್ಯವನ್ನು ನಿರ್ಮಿಸಲಾಗುತ್ತಿದೆ. ಈ ಕಾಮಗಾರಿಗಾಗಿ ಇದುವರೆವಿಗೆ ಒಟ್ಟು ರೂ. 13.00 ಲಕ್ಷ ಬಿಡುಗಡೆ ಮಾಡಲಾಗಿದೆ. ಕೆರೆತೊಣ್ಣೂರು ಗ್ರಾಮದ ಕೆರೆಯಲ್ಲಿ ದೋಣಿ ವಿಹಾರಕ್ಕಾಗಿ ಪ್ರವಾಸೋದ್ಯಮ ಇಲಾಖೆಯಿಂದ ಪೆಡಲ್ ಬೋಟು, ರೋಯಿಂಗ್ ಬೋಟು ಹಾಗೂ ಇತರ ಸಲಕರಣೆಗಳನ್ನು ತಿರುಮಲ ಸಾಗರ ಛತ್ರ ಗ್ರಾಮ ಪಂಚಾಯಿತಿಗೆ ನೀಡಲಾಗಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸನ್ಮಾನ್ಯ ಸಭಾಧ್ಯಕ್ಷರೆ, ಕೇಂದ್ರ ಸರ್ಕಾರದ ಧನಸಹಾಯದಿಂದ 33 ಲಕ್ಷ ರೂಪಾಯಿ ಅಂದಾಜು ವೆಚ್ಚದಲ್ಲಿ ಮೇಲುಕೋಟೆ ಪ್ರವಾಸೋದ್ಯಮ ಕಾಮಗಾರಿ ಕೆಲಸವನ್ನು ಕೈಗೊಂಡಿದ್ದೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಕೆರೆತೊಣ್ಣೂರಿನಲ್ಲಿ ಪೆಡಲ್ ಬೋಟು ಮತ್ತು ರೋಯಿಂಗ್ ಬೋಟು ಎರಡನ್ನು ಇಲ್ಲಿ ಬಿಟ್ಟಿದ್ದಾರೆ. ಕೆರೆ ತೊಣ್ಣೂರು ಇಲ್ಲಿಗೆ ನಾನು 3 ತಿಂಗಳ ಹಿಂದೆ ಹೋಗಿದ್ದಾಗ ಅಲ್ಲಿ ಯಾವುದೇ ಬೋಟ್‌ನ ವ್ಯವಸ್ಥೆ ಇರಲಿಲ್ಲ. ಈ ಉತ್ತರ ವಾಸ್ತವಿಕ ವಿಚಾರಕ್ಕೆ ತಪ್ಪಾಗಿದೆ. ನಂತರ ಕುಂತಿಬೆಟ್ಟ. ಇದು ಪೌರಾಣಿಕ ಸ್ಥಳ. ಇಲ್ಲಿ ಪಾಂಡವರು ಅಜ್ಞಾತವಾಸವನ್ನು ಅನುಭವಿಸಿದರು ಎಂದು ಹೇಳುತ್ತಾರೆ. ಪ್ರವಾಸೋದ್ಯಮದಲ್ಲೂ ಸಹ ಆ ಸ್ಥಳ ಅಜ್ಞಾತವಾಸವನ್ನು ಅನುಭವಿಸುತ್ತಿದೆ. ಅದರ ಬಗ್ಗೆ ಏನೂ ಉತ್ತರವನ್ನು ಕೊಟ್ಟಿಲ್ಲ. ಇನ್ನೊಂದು ಕೇಂದ್ರ ಸರ್ಕಾರ ಧನಸಹಾಯ ಕೊಟ್ಟಿದೆ. ಆದರೆ ರಾಜ್ಯ ಸರ್ಕಾರ ಏನು ಧನ ಸಹಾಯ ನೀಡಿದೆ ಇಲ್ಲಿಗೆ ಮತ್ತು ಯಾವ ಮಟ್ಟದ

ಕಾರ್ಯಕ್ರಮ ನಡೆಯುತ್ತಿದೆ ಎನ್ನುವುದರ ಬಗ್ಗೆ ಸಚಿವರು ಪೂರ್ಣ ಮಾಹಿತಿಯನ್ನು ನೀಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಸಾಕಷ್ಟು ವಿವರಣಾತ್ಮಕವಾಗಿ ಕೊಟ್ಟಿದ್ದೇನೆ. ಮೇಲುಕೋಟೆಯಲ್ಲಿ ಕೇಂದ್ರ ಧನಸಹಾಯದಿಂದ 33 ಲಕ್ಷ ರೂಪಾಯಿ ಅಂದಾಜು ವೆಚ್ಚದಲ್ಲಿ ಪ್ರವಾಸಿ ಸೌಲಭ್ಯವನ್ನು ನಿರ್ಮಿಸಲಾಗುತ್ತಿದೆ. ಇದರಲ್ಲಿ ಆಗಿದೆಯೆಂದು ನಾನು ಹೇಳಲಿಲ್ಲ. ಹಾಗೆಯೇ ಅಲ್ಲಿ ಒಂದು ಕೆರೆ ಇದೆ. ಆ ಕೆರೆಯಲ್ಲಿ ಬೋಟಿಂಗ್ ವ್ಯವಸ್ಥೆಗಳನ್ನು ಮಾಡಿದರೆ ಪ್ರವಾಸಿಗಳು ಅಲ್ಲಿಗೆ ಹೋಗಬಹುದೆಂಬ ಕಾರಣದಿಂದ, ಇಲ್ಲಿ ಪ್ರವಾಸೋದ್ಯಮದ ಬಗ್ಗೆ ಮಾತನಾಡುವಾಗ ಪುಟ್ಟಣ್ಣಯ್ಯನವರು ಒಂದು ಮಾತನ್ನು ಹೇಳಿದರು. ಕೆಲವು ವಿಷಯದಲ್ಲಿ ಅವು ಪೌರಾಣಿಕವಾಗಿ ಬಹಳ ಪ್ರಸಿದ್ಧವಾಗಿ ಇರಬಹುದು. ಅವರ ಕಾಲದಲ್ಲಿ ಪಾಂಡವರು ವನವಾಸಕ್ಕೆ ಹೋಗಿದ್ದರೆಂದು ಹೇಳಿದರು. ಹಿಂದಿನ ಸರ್ಕಾರ ಇದ್ದಾಗ ಅವೆಲ್ಲ ವನವಾಸಗಳಿಗೆ ಹೋಗಿದ್ದವು. ವನವಾಸಕ್ಕೆ ಹೋಗಿದ್ದಂಥ ಕ್ಷೇತ್ರಗಳನ್ನು ಈಗ ಸಾಧ್ಯವಾದರೆ ಪ್ರವಾಸಕ್ಕೆ ಬರುವ ರೀತಿ ಏನು ಮಾಡಬೇಕೋ ಆ ರೀತಿ ಮಾಡುತ್ತಿದ್ದೇವೆ. ಆ ಕೆರೆಯನ್ನು ಪಂಚಾಯಿತಿಯವರಿಗೆ ಕೊಟ್ಟಿದ್ದೇವೆ. ಆ ಬೋಟುಗಳನ್ನು ತಿರುಮಲ ಸಾಗರ ಛತ್ರದ ಪಂಚಾಯಿತಿಗೆ ಕೊಟ್ಟಿದ್ದೇವೆ. ಅವರು ಅದನ್ನು ಉಪಯೋಗ ಮಾಡಿಕೊಳ್ಳಬೇಕು. ನಾವು ನೇರವಾಗಿ ಇಲಾಖೆಯಿಂದ ಉಪಯೋಗ ಮಾಡಿಕೊಳ್ಳುವುದಿಲ್ಲ. ಏಕೆಂದರೆ ಇಂತಹ ಕೆರೆಗಳನ್ನು ಕಾಪಾಡಿಕೊಂಡು ಪ್ರವಾಸಿಗರನ್ನು ಆಕರ್ಷಣೆ ಮಾಡಿ ನಡೆಸಿಕೊಂಡು ಹೋಗಬೇಕು. ಆದ್ದರಿಂದ ಅದನ್ನು ಆ ಪಂಚಾಯಿತಿಗೆ ಕೊಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಈಗ ಹಿಂದಿನ ಸರ್ಕಾರ ವನವಾಸಕ್ಕೆ ಹೋದಾಗ ಆ ಕಡೆಗೆ ಹೋಗಿದ್ದರು ಎಂದು ಹೇಳಿದರು. ಈಗ ಪ್ರವಾಸಕ್ಕೆ ಬಂದಿದ್ದಾರೆ ಎಂದು ಗೊತ್ತಾಯಿತು. ನೀವು ಮುಂದೆ ವನವಾಸಕ್ಕೆ ಹೋಗುವುದಕ್ಕೆ ಆದರೂ ಅದನ್ನು ಸರಿಪಡಿಸಿಕೊಳ್ಳಿ. ನೀವು ಮುಂದೆ ಹೋಗಲೇಬೇಕಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಇಲ್ಲ ಇಲ್ಲ ಹೋಗುವುದಿಲ್ಲ. ಹೋಗುವಾಗ ಅವರನ್ನು ಕರೆದುಕೊಂಡೇ ಹೋಗುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಾನು ಯಾವತ್ತೂ ಪಟೇಲರ ಜೊತೆಯಲ್ಲಿ ವನವಾಸಕ್ಕೆ ಮಾತ್ರ ಹೋಗುವುದಿಲ್ಲ.

ಅಧ್ಯಕ್ಷರು : ಅವರ ಜೊತೆ ವನವಾಸಕ್ಕೆ ಅಲ್ಲದಿದ್ದರೂ ಪ್ರವಾಸಕ್ಕೆ ಹೋಗುವುದಕ್ಕೆ ಸಿದ್ಧರಾಗಿ.

ಬೀಳಗಿ ಮತ ಕ್ಷೇತ್ರದ ಜಮಖಂಡಿ ತಾಲ್ಲೂಕಿನ ಸಾವಳಗಿ ಇಲ್ಲವೇ ಹೀರೇ ಪಡಸಲಗಿ ಸಮೀಪ ವಿದ್ಯುತ್ ಸ್ಥಾವರ ಸ್ಥಾಪನೆ

503 - ಶ್ರೀ ಜೆ. ಟಿ. ಪಾಟೀಲ್ (ಬೀಳಗಿ) : ಮಾನ್ಯ ಉಪಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀಳಗಿ ಮತ ಕ್ಷೇತ್ರದ ಜಮಖಂಡಿ ತಾಲ್ಲೂಕಿನ ಸಾವಳಗಿ ಇಲ್ಲವೇ ಹೀರೆ ಪಡಸಲಗಿ ಸಮೀಪ 110 ವಿದ್ಯುತ್ ಸ್ಥಾವರ ಸ್ಥಾಪಿಸುವ ಸಲುವಾಗಿ ಬೇಡಿಕೆ ಇದ್ದುದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದರೆ ಸರ್ಕಾರ ಇದರ ಸಲುವಾಗಿ ತೆಗೆದುಕೊಂಡ ಕ್ರಮಗಳೇನು?

ಇ) 1996-97ನೇ ಸಾಲಿನಲ್ಲಿ ಈ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದೇ?

ಶ್ರೀ ಜೆ. ಹೆಚ್. ಪಟೇಲ್ (ಉಪಮುಖ್ಯ ಮಂತ್ರಿ) :

ಅ) ಹೌದು